# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s Tata Power Renewable Energy Limited ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಗಜೇಂದ್ರಗಡ ಮತ್ತು ಯಲಬುರ್ಗಾ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 100.8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :**
1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/ 08/ TPREL-100.8 MW/Koppal/F-139(2022)/200, ದಿನಾಂಕ: 18.01.2023.
2) ದಿನಾಂಕ:21.01.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.
3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

ಸಂ. 595 ದಿನಾಂಕ 15/2/23

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Tata Power Renewable Energy Limited ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಗಜೇಂದ್ರಗಡ ಮತ್ತು ಯಲಬುರ್ಗಾ ತಾಲ್ಲೂಕುಗಳ ಮೈಗೇರಿ, ಹೊಸೂರು ಮತ್ತು ರಾಮ್‌ಪುರ ಗ್ರಾಮಗಳಲ್ಲಿ 100.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System ಮುಖಾಂತರ ಸರಬರಾಜು ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

M/s Tata Power Renewable Energy Limited ಕಂಪನಿಯು 100.8 ಮೆ.ವ್ಯಾ. ಸಾಮರ್ಥ್ಯಕ್ಕೆ ಅರ್ಜಿ ಶುಲ್ಕ ಹಾಗೂ 30% ಸಂಸ್ಕರಣಾ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ಪಾವತಿಸಿರುತ್ತಾರೆ. ಉಳಿದ 70% ಸಂಸ್ಕರಣಾ ಶುಲ್ಕವನ್ನು ಒಡಂಬಡಿಕೆ ಮಾಡಿಕೊಳ್ಳುವ ಪೂರ್ವದಲ್ಲಿ ಸಂದಾಯ ಮಾಡುವುದಾಗಿ ಅಭಿವೃದ್ಧಿದಾರರು ಒಡಂಬಡಿಕೆ ಕರಾರಿನ ಮೇಲೆ ಮುಚ್ಚಳಿಕೆಯನ್ನು ನೀಡಿರುವುದಾಗಿ ಕೆ.ಆರ್.ಇ.ಡಿ.ಎಲ್. ನಿಯಮಿತವು ತಿಳಿಸಿರುತ್ತದೆ.

M/s Tata Power Renewable Energy Limited ಕಂಪನಿಯ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿಯವರು ಕೋರಿರುವ ಸ್ಥಳವು ಈ ಹಿಂದೆ M/s CBM Corporation ಕಂಪನಿಗೆ ದಿನಾಂಕ:10.02.2021ರಂದು ನಡೆದ ರಾಜ್ಯ ಮಟ್ಟದ ಹಂಚಿಕೆ ಸಮಿತಿ ಸಭೆಯಲ್ಲಿ ಹಂಚಿಕೆ ಆದೇಶ ನೀಡಲು ಶಿಫಾರಸ್ಸುಗೊಂಡಿರುವ 12 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಮತ್ತು M/s Fortune Cotton and Agro Industries ಕಂಪನಿಯು ಸದರಿ ಸ್ಥಳದಲ್ಲಿ 25 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ತಾತ್ವಿಕ ಅನುಮೋದನೆಗೆ ಸಲ್ಲಿಸಿದ್ದ ಪ್ರಸ್ತಾವನೆ ಮೇಲೆ ಬರುತ್ತಿದ್ದು, ಎರಡೂ ಕಂಪನಿಗಳು ಕಾರಣಾಂತರಗಳಿಂದ ಯೋಜನೆಯನ್ನು ಹಿಂಪಡೆಯುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, M/s Tata Power Renewable Energy Limited ಕಂಪನಿಯು ಹಂಚಿಕೆಗಾಗಿ ಕೋರಿರುವ ಸ್ಥಳವು ಲಭ್ಯವಿರುತ್ತದೆ.

Wind Section
Inward No. 1644
Date 20/2/23
Sig.

....2